(ಕಂದಾಯ ಇಲಾಖೆ)

# ಸಹಾಯಕ ಆಯುಕ್ತರವರ ನ್ಯಾಯಾಲಯ, ಹೊಸಪೇಟೆ.

ಎ.ವಿಲೇ.ಸಂ.ಕಂ.ಪಹಣಿ:ಅಪೀಲು:98/2013-14 ದಿನಾಂಕ:05.07.2016.

**ಉಪಸ್ಥಿತರು: ಡಾ. ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ**
**ಸಹಾಯಕ ಆಯುಕ್ತರು, ಹೊಸಪೇಟೆ.**

* * * * *

**ವಾದಿಗಳು: ಶ್ರೀ/ ಶ್ರೀಮತಿ**

1] ಕೊಟ್ಯಾಳ ಗೋವಿಂದಪ್ಪ ತಂದೆ ದಿ॥ ಹುಲುಗಪ್ಪ,
**ವಾಸ:** ಹಂಪಾಪಟ್ಟಣ ಗ್ರಾಮ,
ಹಗರಿಬೊಮ್ಮನಹಳ್ಳಿ ತಾಲೂಕು,
ಬಳ್ಳಾರಿ ಜಿಲ್ಲೆ.

**[ಶ್ರೀ ಅಶೋಕ ಕನಕೇರಿ, ವಕೀಲರು, ಹೊಸಪೇಟೆ]**

**ಪ್ರತಿವಾದಿಗಳು: ಶ್ರೀ/ ಶ್ರೀಮತಿ**

1] ಕೊಟ್ಯಾಳ ದ್ಯಾಮಜ್ಜ ತಾಯಿ ಲೇಸಿ ಹನುಮವ್ವ,
2] ಕೊಟ್ಯಾಳ ಯಮುನಪ್ಪ ತಂದೆ ಸಣ್ಣ ಹನುಮಂತಪ್ಪ,
**ಉಭಯರ ವಾಸ:** ಹಂಪಾಪಟ್ಟಣ ಗ್ರಾಮ,
ಹಗರಿಬೊಮ್ಮನಹಳ್ಳಿ ತಾಲೂಕು, ಬಳ್ಳಾರಿ ಜಿಲ್ಲೆ.
**[ಶ್ರೀ ಬಿ.ಶೇಕ್ ವಲಿ, ವಕೀಲರು, ಹಗರಿಬೊಮ್ಮನಹಳ್ಳಿ]**
3] ತಹಶೀಲ್ದಾರರು, ಹಗರಿಬೊಮ್ಮನಹಳ್ಳಿ.

**ವ್ಯಾಜ್ಯದ ಜಮೀನು**

| ತಾಲೂಕು | ಹೋಬಳಿ | ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|---|---|
| ಹಗರಿಬೊಮ್ಮನಹಳ್ಳಿ | ಹಗರಿಬೊಮ್ಮನಹಳ್ಳಿ | ಹಂಪಾಪಟ್ಟಣ | 32/ಸಿ2 | 00 ಎಕರೆ 70 ಸೆಂಟ್ಸ್ |

**ಪೀಠಿಕೆ:-**

ಹಗರಿಬೊಮ್ಮನಹಳ್ಳಿ ತಾಲೂಕು ಹಗರಿಬೊಮ್ಮನಹಳ್ಳಿ ಹೋಬಳಿ ಹಂಪಾಪಟ್ಟಣ ಗ್ರಾಮದ ಸ.ನಂ.32/ಸಿ2 ವಿಸ್ತೀರ್ಣ:00 ಎಕರೆ 70 ಸೆಂಟ್ಸ್; ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ತಹಶೀಲ್ದಾರರು, ಹಗರಿಬೊಮ್ಮನಹಳ್ಳಿ ಇವರ ನ್ಯಾಯಾಲಯದ ಆದೇಶ ಸಂಖ್ಯೆ:ಸಂ/ಕಂ/ಪಹಣಿ/ವಿವಾದ/73/2012-13 ದಿನಾಂಕ:24.07.2013 ವನ್ನು ಪ್ರಶ್ನಿಸಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಮೇಲ್ಮನವಿಯನ್ನು ವಾದಿಪರ ವಕೀಲರು ದಿನಾಂಕ:20.01.2015 ರಂದು ಸಲ್ಲಿಸಿರುತ್ತಾರೆ.

ವಾದಿಗಳ ಪರ ವಕೀಲರು ಸಲ್ಲಿಸಿದ ಕಡತವನ್ನು ಪರಿಶೀಲಿಸಿ, ನೈಸರ್ಗಿಕ ನ್ಯಾಯದ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:01.10.2013 ಕ್ಕೆ ನಿಗಧಿಪಡಿಸಿ ಉಭಯಪಕ್ಷಗಳಿಗೆ ನೋಟೀಸು ಮೂಲಕ ತಿಳಿಸಿ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

ವಾದಿಪರ ವಕೀಲರ ಪ್ರಕಾರ, ಸದರಿ ವ್ಯಾಜ್ಯದ ಜಮೀನನ್ನು ವಾದಿಯು ಪ್ರತಿವಾದಿ-1 ರವರಿಂದ ರೂ.74,000/- ಗಳಿಗೆ ದಿನಾಂಕ:05.09.2012 ರಂದು ಕ್ರಯಕ್ಕೆ ಪಡೆದಿರುವುದಾಗಿ, ನಂತರದಲ್ಲಿ ನೋಂದಾಯಿತ ಕ್ರಯ ದಸ್ತಾವೇಜು ಮಾಡಿಸಿಕೊಡುವುದಾಗಿ ತಿಳಿಸಿರುವುದಾಗಿ ನಂತರದಲ್ಲಿ ಯಾವುದೇ ಈ ಬಗ್ಗೆ ಯಾವುದೇ ನೋಂದಣಿ ಮಾಡಿಸಲು ಬಂದಿರುವುದಿಲ್ಲವೆಂದು ತಿಳಿಸಿ ಈ ಬಗ್ಗೆ ನೋಂದಾಯಿತವಲ್ಲದ ಕ್ರಯ ಪತ್ರವನ್ನು ಹಾಜರುಪಡಿಸಿರುತ್ತಾರೆ. ಆದರೆ ಪ್ರತಿವಾದಿ-1 ರವರು ಪ್ರತಿವಾದಿ-2 ರವರಿಗೆ ದಿನಾಂಕ:08.10.2012 ರಂದು ನೋಂದಾಯಿತ ಕ್ರಯ ದಸ್ತಾವೇಜಿನ ಮೂಲಕ ಸದರಿ ವ್ಯಾಜ್ಯದ ಜಮೀನನ್ನು ಕ್ರಯಕ್ಕೆ ನೀಡಿರುತ್ತಾರೆಂದು ತಿಳಿಸಿರುತ್ತಾರೆ. ಆದ್ದರಿಂದ ವಾದಿಯು ಪ್ರತಿವಾದಿ-2 ರವರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಪ್ರತಿವಾದಿ-3 ರವರಲ್ಲಿ ಆಕ್ಷೇಪಣೆ ನೀಡಿರುವುದಾಗಿ, ಆದರೆ ಪ್ರತಿವಾದಿ-3 ರವರು ದಿನಾಂಕ:24.07.2013 ರ ದಾಖಲೆಯನ್ನು ಪರಿಗಣಿಸದೇ ಪ್ರತಿವಾದಿ-2 ರವರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಆದೇಶಿಸಿರುವುದಾಗಿ, ಪ್ರತಿವಾದಿ-3 ರವರು ಮಾಡಿರುವ ಆದೇಶವು ಕಾನೂನು ಬಾಹಿರವಾಗಿರುವುದಾಗಿ, ಸದರಿ ಆದೇಶದಿಂದ ಬಾಧಿತಗೊಂಡ ವಾದಿಯು ಸದರಿ ಅಪೀಲನ್ನು ಸಲ್ಲಿಸಿರುವುದಾಗಿ, ಹಾಗೂ ಸದರಿ ಅಪೀಲನ್ನು ಅಂಗೀಕರಿಸಿ, ಸದರಿ ಪ್ರಶ್ನಿತ ಆದೇಶವನ್ನು ತಳ್ಳಿಹಾಕುವಂತೆ ಮನವಿ ಮಾಡಿಕೊಂಡಿರುತ್ತಾರೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕಡತದಲ್ಲಿಯ ದಾಖಲೆಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ಅಂಶಗಳು ಕಂಡು ಬಂದಿರುತ್ತವೆ.

1. ವಾದಿಯಾದ ಕ್ವಾಟಿಹಾಳ್ ಗೋವಿಂದಪ್ಪ ತಂದೆ ಲೇಟ್ ಹುಲುಗಪ್ಪ ಇವರು ಪ್ರತಿವಾದಿ-1 ರವರಾದ ಕ್ವಾಟಿಹಾಳ್ ದ್ಯಾಮಜ್ಜ ತಾಯಿ ಲೇಸಿ ಹನುಮವ್ವ ಇವರಿಂದ ಸದರಿ ವ್ಯಾಜ್ಯದ ಜಮೀನನ್ನು ರೂ.74,000/- ಗಳಿಗೆ ದಿನಾಂಕ:05.09.2012 ರಂದು ಕ್ರಯಕ್ಕೆ ಪಡೆದಿರುವುದಾಗಿ ಈ ಬಗ್ಗೆ ನೋಂದಾಯಿತವಲ್ಲದ ಕ್ರಯ ಪತ್ರವನ್ನು ಹಾಜರುಪಡಿಸಿರುತ್ತಾರೆ.
2. ಸದರಿ ವ್ಯಾಜ್ಯದ ಸ.ನಂ.32/ಸಿ2 ವಿಸ್ತೀರ್ಣ:00 ಎಕರೆ 70 ಸೆಂಟ್ಸ್ ದಿ:01.04.2002 ರಿಂದ ದಿ:18.10.2012 ರವರೆಗಿನ ಇ.ಸಿ.(ನಮೂನೆ-15) ಪ್ರತಿಯನ್ನು ಸಲ್ಲಿಸಿದ್ದು, ಇದರಲ್ಲಿ ಕೊಟ್ಯಾಳ್ ದ್ಯಾಮಪ್ಪ ಇವರು ಕೊಟ್ಯಾಳ್ ಯಮುನಪ್ಪ ಇವರಿಗೆ ರೂ.28,000/- ಗಳಿಗೆ ನೋಂದಾಯಿತ ಕ್ರಯ ದಸ್ತಾವೇಜು ಸಂಖ್ಯೆ:2741/12-13 ದಿನಾಂಕ:08.10.2012 ರ ಮೂಲಕ ಕ್ರಯಕ್ಕೆ ಪಡೆದಿರುವುದು ಕಂಡುಬಂದಿರುತ್ತದೆ.
3. ಸದರಿ ಪ್ರಶ್ನಿತ ತಹಶೀಲ್ದಾರರು, ಹಗರಿಬೊಮ್ಮನಹಳ್ಳಿ ಇವರ ನ್ಯಾಯಾಲಯದ ಆದೇಶ ಸಂಖ್ಯೆ: ಸಂ/ಕಂ/ಪಹಣಿ/ವಿವಾದ/73/2012-13 ದಿನಾಂಕ:24.07.2013 ವನ್ನು ಸಲ್ಲಿಸಿದ್ದು, ಸದರಿ ಆದೇಶದಲ್ಲಿ ಕೊಟ್ಯಾಳ್ ಗೋವಿಂದಪ್ಪ ಇವರು ಸದರಿ ವ್ಯಾಜ್ಯದ ಜಮೀನನ್ನು ಕ್ರಯಕ್ಕೆ ಹೊಂದಲು ವಿಕ್ರಯದಾರರಿಂದ ಕ್ರಯ ಒಪ್ಪಂದ ಮಾಡಿಕೊಂಡಿರುವ ಕುರಿತು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಕಾರಣ ತಕರಾರನ್ನು ತಳ್ಳಿಹಾಕುತ್ತಾ, ನೋಂದಾಯಿತ ಕ್ರಯ ದಸ್ತಾವೇಜಿನ ಪ್ರಕಾರ ಕ್ರಯದಾರರಾದ ಕೋಟ್ಯಾಳ್ ಯಮುನಪ್ಪ ಇವರ ಹೆಸರಿಗೆ ಹಕ್ಕು ಬದಲಾವಣೆಗೆ ಆದೇಶ ನೀಡಿರುವುದು ಕಂಡು ಬಂದಿರುತ್ತದೆ.
4. ವಾದಿಯು ಸದರಿ ವ್ಯಾಜ್ಯದ ಜಮೀನಿನ ಬಗ್ಗೆ ಮಾನ್ಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ, ಹಗರಿಬೊಮ್ಮನಹಳ್ಳಿ ಇವರಲ್ಲಿ ಓ.ಎಸ್.ನಂ.140/2013 ರಡಿಯಲ್ಲಿ ಪ್ರಕರಣ ಬಾಕಿ ಇರುವುದು ಕಂಡುಬಂದಿರುತ್ತದೆ.
5. ನೋಂದಾಯಿತ ಕ್ರಯ ದಸ್ತಾವೇಜು ಸಂಖ್ಯೆ:2741/2012-13 ದಿನಾಂಕ:08.10.2012 ವನ್ನು ಹಾಜರುಪಡಿಸಿದ್ದು, ಕೊಟ್ಯಾಳ್ ದ್ಯಾಮಪ್ಪ ತಾಯಿ ಹನುಮವ್ವ ಇವರು ಕೊಟ್ಯಾಳ ಯಮುನಪ್ಪ ತಂದೆ ಸಣ್ಣ ಹನುಮಂತಪ್ಪ ಇವರಿಗೆ ಕ್ರಯಕ್ಕೆ ಕೊಟ್ಟ ಬಗ್ಗೆ ನಮೂದು ಇರುತ್ತದೆ.
6. 2013-14 ನೇ ಸಾಲಿನ ಗಣಕೀಕೃತ ಪಹಣಿ ಲಗತ್ತಿಸಿದ್ದು, ಕೊಟ್ಯಾಳ ದ್ಯಾಮಪ್ಪ ತಾಯಿ ಹನುಮವ್ವ ಇವರ ಹೆಸರು ಪಹಣಿ ಕಾಲಂ 9 ರಲ್ಲಿ ನಮೂದು ಇರುವುದು ಕಂಡುಬಂದಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಮೇಲಿನ ಎಲ್ಲ ಅಂಶಗಳನ್ನು ಪರಿಶೀಲಿಸಲಾಗಿ ಹಾಗೂ ಪ್ರಕರಣದಲ್ಲಿಯ ದಾಖಲೆಗಳ ಆಧಾರದ ಮೇಲೆ, ಹಗರಿಬೊಮ್ಮನಹಳ್ಳಿ ತಾಲೂಕು ಹಗರಿಬೊಮ್ಮನಹಳ್ಳಿ ಹೋಬಳಿ ಹಂಪಾಪಟ್ಟಣ ಗ್ರಾಮದ ಸ.ನಂ.32/ಸಿ2 ವಿಸ್ತೀರ್ಣ:00 ಎಕರೆ 70 ಸೆಂಟ್ಸ್ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ತಹಶೀಲ್ದಾರರು, ಹಗರಿಬೊಮ್ಮನಹಳ್ಳಿ ಇವರ ನ್ಯಾಯಾಲಯದ ಆದೇಶ ಸಂಖ್ಯೆ:ಸಂ/ಕಂ/ಪಹಣಿ/ವಿವಾದ/73/2012-13 ದಿನಾಂಕ:24.07.2013 ವನ್ನು ರದ್ದುಪಡಿಸುತ್ತಾ, ಸದರಿ ವ್ಯಾಜ್ಯದ ಜಮೀನನ್ನು ನೋಂದಾಯಿತ ಕ್ರಯ ದಸ್ತಾವೇಜಿನ ಪ್ರಕಾರ ಪ್ರತಿವಾದಿ-2 ರವರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಈ ಕೆಳಕಂಡತೆ

## -: ಆದೇಶ :-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ **ಅಪೀಲನ್ನು ವಜಾಗೊಳಿಸುತ್ತಾ,** ಹಗರಿಬೊಮ್ಮನಹಳ್ಳಿ ತಾಲೂಕು ಹಗರಿಬೊಮ್ಮನಹಳ್ಳಿ ಹೋಬಳಿ ಹಂಪಾಪಟ್ಟಣ ಗ್ರಾಮದ ಸ.ನಂ.32/ಸಿ2 ವಿಸ್ತೀರ್ಣ:00 ಎಕರೆ 70 ಸೆಂಟ್ಸ್ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ತಹಶೀಲ್ದಾರರು, ಹಗರಿಬೊಮ್ಮನಹಳ್ಳಿ ಇವರ ನ್ಯಾಯಾಲಯದ ಆದೇಶ ಸಂಖ್ಯೆ:ಸಂ/ಕಂ/ಪಹಣಿ/ವಿವಾದ/73/2012-13 ದಿನಾಂಕ:24.07.2013 ವನ್ನು ರದ್ದುಪಡಿಸುತ್ತಾ, ಸದರಿ ವ್ಯಾಜ್ಯದ ಜಮೀನನ್ನು ನೋಂದಾಯಿತ ಕ್ರಯ ದಸ್ತಾವೇಜಿನ ಪ್ರಕಾರ ಪ್ರತಿವಾದಿ-2 ರವರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ತಹಶೀಲ್ದಾರರು, ಹಗರಿಬೊಮ್ಮನಹಳ್ಳಿ ಇವರಿಗೆ ಆದೇಶಿಸಿದೆ. ಹಾಗೂ ವಾದಿಗಳು ತಮ್ಮ ನೋಂದಾಯಿತವಲ್ಲದ ಕ್ರಯ ಪತ್ರದ ನೈಜತೆಯ ಬಗ್ಗೆ ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳಲು ಸೂಚಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:05.07.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

[ ಡಾ॥ ಅವಿನಾಶ್ ಮೆನನ್‌ರಾಜೇಂದ್ರನ್, ಭಾ.ಆ.ಸೇ]
**ಸಹಾಯಕ ಆಯುಕ್ತರು,**
**ಹೊಸಪೇಟೆ.**

ವಾದಿ : ಪ್ರತಿವಾದಿಗಳಿಗೆ

<u>ಪ್ರತಿಯನ್ನು:</u>- ತಹಶೀಲ್ದಾರರು, ಹಗರಿಬೊಮ್ಮನಹಳ್ಳಿ ಇವರಿಗೆ ಸಂಬಂಧಿಸಿದ ಮೂಲ ಕಡತದೊಂದಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.